ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಕನಕಪುರ-ಬೆಂಗಳೂರು ದಿಂಡಿಗಲ್ ಚತುಷ್ಪಥ ರಸ್ತೆ ಬಗ್ಗೆ

ಶ್ರೀಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

361 (374) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಎನ್‌ಹೆಚ್ 209 ಬೆಂಗಳೂರು-ಕನಕಪುರ ಚತುಷ್ಪಥ ರಸ್ತೆ ಕಾಮಗಾರಿಯ ವಿಳಂಬದಿಂದಾಗಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು ;

(ಆ) ಎನ್‌ಹೆಚ್ 209 ಬೆಂಗಳೂರು-ದಿಂಡಿಗಲ್ ರಸ್ತೆಗಾಗಿ ಒಟ್ಟು ಭೂಸ್ವಾಧೀನವಾದ ಜಮೀನು ಎಷ್ಟು ; ಇದರಲ್ಲಿ ಸರ್ಕಾರಿ ಜಮೀನು ಎಷ್ಟು ; ಅರಣ್ಯ ಇಲಾಖೆಯ ಜಮೀನು ಎಷ್ಟು ; ಹಿಡುವಳಿ ಜಮೀನು ಎಷ್ಟು ; ಹಾಗೂ ಇನ್ನೂ ಭೂಸ್ವಾಧೀನಗೊಳ್ಳದೆ /ತಕರಾರುಗಳು ಇರುವ ಜಮೀನುಗಳು ಏನಾದರೂ ಇವೆಯೇ? (ವಿವರ ನೀಡುವುದು)